ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ನಂಜನಗೂಡು

ಓಂ ನಮಃ ಶಿವಾಯ, ಓಂ ನಮಃ ಶಿವಾಯ, ಓಂ ನಮಃ ಶಿವಾಯ, ಓಂ ನಮಃ ಶಿವಾಯ,

ಓಂ ನಮಃ ಶಿವಾಯ

ವಿಶ್ವೇಶ್ವರಾಯ ನರಕಾರ್ಣವ ತಾರಣಾಯ ಕರ್ಣಾಮೃತಾಯ ಶಶಿಶೇಖರ ಧಾರಣಾಯ । ಕರ್ಪೂರಕಾಂತಿ ಧವಳಾಯ ಜಟಾಧರಾಯ ದಾರಿದ್ರ್ಯದುಃಖ ದಹನಾಯ ನಮಶ್ಶಿವಾಯ ॥

ಗೌರೀಪ್ರಿಯಾಯ ರಜನೀಶ ಕಳಾಧರಾಯ ಕಾಲಾಂತಕಾಯ ಭುಜಗಾಧಿಪ ಕಂಕಣಾಯ । ಗಂಗಾಧರಾಯ ಗಜರಾಜ ವಿಮರ್ಧನಾಯ ದಾರಿದ್ರ್ಯದುಃಖ ದಹನಾಯ ನಮಶ್ಶಿವಾಯ ॥

ಭಕ್ತಪ್ರಿಯಾಯ ಭವರೋಗ ಭಯಾಪಹಾಯ ಉಗ್ರಾಯ ದುಃಖ ಭವಸಾಗರ ತಾರಣಾಯ । ಜ್ಯೋತಿರ್ಮಯಾಯ ಗುಣನಾಮ ಸುನೃತ್ಯಕಾಯ ದಾರಿದ್ರ್ಯದುಃಖ ದಹನಾಯ ನಮಶ್ಶಿವಾಯ ॥

ಚರ್ಮಾಂಬರಾಯ ಶವಭಸ್ಮ ವಿಲೇಪನಾಯ ಫಾಲೇಕ್ಷಣಾಯ ಮಣಿಕುಂಡಲ ಮಂಡಿತಾಯ । ಮಂಜೀರಪಾದಯುಗಳಾಯ ಜಟಾಧರಾಯ ದಾರಿದ್ರ್ಯದುಃಖ ದಹನಾಯ ನಮಶ್ಶಿವಾಯ ॥

ಪಂಚಾನನಾಯ ಫಣಿರಾಜ ವಿಭೂಷಣಾಯ ಹೇಮಾಂಕುಶಾಯ ಭುವನತ್ರಯ ಮಂಡಿತಾಯ ಆನಂದ ಭೂಮಿ ವರದಾಯ ತಮೋಪಯಾಯ ದಾರಿದ್ರ್ಯದುಃಖ ದಹನಾಯ ನಮಶ್ಶಿವಾಯ ॥

ಭಾನುಪ್ರಿಯಾಯ ಭವಸಾಗರ ತಾರಣಾಯ ಕಾಲಾಂತಕಾಯ ಕಮಲಾಸನ ಪೂಜಿತಾಯ । ನೇತ್ರತ್ರಯಾಯ ಶುಭಲಕ್ಷಣ ಲಕ್ಷಿತಾಯ ದಾರಿದ್ರ್ಯದುಃಖ ದಹನಾಯ ನಮಶ್ಶಿವಾಯ ॥

ರಾಮಪ್ರಿಯಾಯ ರಘುನಾಥ ವರಪ್ರದಾಯ ನಾಗಪ್ರಿಯಾಯ ನರಕಾರ್ಣವ ತಾರಣಾಯ । ಪುಣ್ಯಾಯ ಪುಣ್ಯಭರಿತಾಯ ಸುರಾರ್ಚಿತಾಯ ದಾರಿದ್ರ್ಯದುಃಖ ದಹನಾಯ ನಮಶ್ಶಿವಾಯ ॥

ಮುಕ್ತೇಶ್ವರಾಯ ಫಲದಾಯ ಗಣೇಶ್ವರಾಯ ಗೀತಾಪ್ರಿಯಾಯ ವೃಷಭೇಶ್ವರ ವಾಹನಾಯ । ಮಾತಂಗಚರ್ಮ ವಸನಾಯ ಮಹೇಶ್ವರಾಯ ದಾರಿದ್ರ್ಯದುಃಖ ದಹನಾಯ ನಮಶ್ಶಿವಾಯ ॥

ವಸಿಷ್ಠೇನ ಕೃತಂ ಸ್ತೋತ್ರಂ ಸರ್ವರೋಗ ನಿವಾರಣಮ್ ।
ಸರ್ವಸಂಪತ್ಕರಂ ಶೀಘ್ರಂ ಪುತ್ರಪೌತ್ರಾದಿ ವರ್ಧನಮ್ ।
ತ್ರಿಸಂಧ್ಯಂ ಯಃ ಪಠೇನ್ನಿತ್ಯಂ ಸ ಹಿ ಸ್ವರ್ಗ ಮವಾಪ್ನುಯಾತ್ ॥

" ಶ್ರೀ ನಂಜುಂಡೇಶ್ವರ" ನಮೋ ನಮಃ.

ಕಾರ್ತೀಕ ಮಾಸದಲ್ಲಿ ನಂಜುಂಡೇಶ್ವರನನ್ನು ದರ್ಶನ ಮಾಡದಿದ್ದರೆ ಹೇಗೆ?

"ಓಂ ನಮಃ ಶಿವಾಯ" ಅಂತ ಪಂಚಾಕ್ಷರೀ ಮಂತ್ರ ಜಪಿಸುತ್ತಾ, ಅಸ್ತಮಿಸುತ್ತಿರುವ ಸೂರ್ಯನನ್ನು ನೋಡಿದಾಗ, ಈ ಪ್ರದೋಷ ಕಾಲದಲ್ಲೇ ಅಲ್ಲವೇ, ಈಶ್ವರ ಪಾರ್ವತಿಯರು ಜೊತೆ ಜೊತೆಯಲ್ಲಿ ನರ್ತನ ಮಾಡುತ್ತಾ, ಅತಿ ಪ್ರಸನ್ನರಾಗಿರುವುದು ಎಂದುಕೊಳ್ಳುತ್ತಿರುವಾಗಲೇ, ಕಪಿಲಾ ನದಿಯ ಮೇಲೆ ಇರುವ Oldest Bridge ಕಂಡು, ನಂತರ Railway Crossing ದಾಟಿ, Ambedkar Circle ಸುತ್ತಿಕೊಂಡು, ಮುಂದೆ ಹೋಗುತ್ತಾ ಇರುವಾಗ, ದೂರದಿಂದಲೇ ಕಾಣುತ್ತಿರುವ, ದೊಡ್ಡ ನೀಲಿ ಬಣ್ಣದಲ್ಲಿರುವ ಶಿವನ ಪ್ರತಿಮೆಯನ್ನು ನೋಡಿ, ನಂಜುಂಡೇಶ್ವರ ದೇವಸ್ಥಾನದ ಗೋಪುರಕ್ಕೆ ನಮಸ್ಕಾರ ಮಾಡಿಕೊಂಡು, Car ಅನ್ನು Park ಮಾಡಿ, ನಾನು ನಾನು ಅಂತ ಸುತ್ತುವರೆದ, ಹರಕೆ ವಸ್ತುಗಳನ್ನು ಮಾರುವವರ ಹತ್ತಿರ ಬೇಕಾದ ಹರಕೆಗಳು, ಬಿಲ್ವಪತ್ರೆ, ತುಳಸಿ, ಹೂವು ಎಲ್ಲಾ ತೊಗೊಂಡು, ದೇವಸ್ಥಾನದ ಮಹಾ ದ್ವಾರದ ಹತ್ತಿರಕ್ಕೆ ಹೋದಾಗ, ಕೆಳಗಡೆ ಇರುವ ಕೊಳವೆಗಳಿಂದ ತಾನಾಗಿ ಬರುತಿರುವ ನೀರಿನಲ್ಲಿ ಕಾಲುಗಳನ್ನು ತೊಳೆದು, ಮಹಾದ್ವಾರ, ಅದರ ಪಕ್ಕದಲ್ಲಿರುವ ದೊಡ್ಡ ದೊಡ್ಡ ಸ್ತಂಭಗಳು, ಅದರ ಮೇಲೆ ಇರೋ ಕೆತ್ತನೆಗಳು ಎಲ್ಲಾ ನೋಡಿ, ಮಹಾದ್ವಾರದ ದೊಡ್ಡ ಹೊಸಿಲಿಗೆ ನಮಸ್ಕಾರ ಮಾಡಿಕೊಂಡು, ಎಡಗಡೆ ಇರುವ ಗಣಪನಿಗೆ, ಬಲಗಡೆ ಇರುವ ಅಮ್ಮ ಮಹಾಶಕ್ತಿಗೆ ನಮಸ್ಕಾರ ಮಾಡಿ, ಇನ್ನೊಂದು ದೊಡ್ಡ ಮೆಟ್ಟಿಲ ಬಳಿ ಬರೋ ಹೊತ್ತಿಗೆ, Open ಮಂಟಪ, ಅದರ ಹಿಂದೆ ಕಲ್ಯಾಣ ಮಂಟಪ, ಅದರ ಪಕ್ಕದಲ್ಲಿ ದೊಡ್ಡ ನಂದಿ, ಬಲಗಡೆ ದೊಡ್ಡ ಬಿಲ್ವಪತ್ರೆ ಮರ, ಅದರ ಕೆಳಗೆ ತುಳಸಿ ಕಟ್ಟೆ, ತುಲಾಭಾರ ಮಾಡಿಸುವ ಜಾಗ ಎಲ್ಲಾ ನೋಡಿ, ನೇರವಾಗಿ ಮುಂದಕ್ಕೆ ಹೋಗಿ, ಮೆಟ್ಟಲನ್ನು ಹತ್ತಿ ಬಲಗಡೆ ಇರುವ ಕಲ್ಯಾಣ ಮಂಟಪ, ಎಡಗಡೆ ಇರುವ ಸಾಲು ಕಂಬಗಳನ್ನೆಲ್ಲಾ ದಾಟಿ, ಕಂಬಗಳಲ್ಲಿರುವ ಕೆತ್ತನೆಗಳು, ವೀರಭದ್ರೇಶ್ವರ ಎಲ್ಲಾ ನೋಡಿ, ಮುಂದಕ್ಕೆ ಹೋಗಿ, ಬಲಗಡೆ ತಿರುಗಿ, Queue ನಲ್ಲಿ ಹೋಗುತ್ತಾ, ಅಲ್ಲಿ ಇರುವ ದೊಡ್ಡ ಧ್ವಜಸ್ತಂಭವನ್ನು ನೋಡಿ, ಅದರ ಸುತ್ತಲೂ ಇಟ್ಟಿರುವ ದೀಪಗಳನ್ನೆಲ್ಲಾ ಕಣ್ತುಂಬಿಕೊಂಡು, ಹೊಸಿಲಿಗೆ ನಮಸ್ಕಾರ ಮಾಡಿ, ಮೆಟ್ಟಿಲು ಹತ್ತಿದಾಕ್ಷಣ, ಭವ್ಯವಾದ ನಂಜುಂಡೇಶ್ವರನ ದರ್ಶನ.

ಮೃತ್ಯುಂಜಯಾಯ ರುದ್ರಾಯ ನೀಲಕಂಠಾಯ ಶಂಭುವೇ ।
ಅಮೃತೇಶಾಯ ಶರ್ವಾಯ ಮಹಾದೇವಾಯ ತೇ ನಮಃ ॥

ಎಂದು ಪ್ರಾರ್ಥಿಸಿ, ಆ ಕಡೆ, ಈ ಕಡೆ ತೂಗಾಡುತ್ತಿರುವ ದೀಪದ ಕಾಂತಿ, ಮುಂದೆ ಸದಾ ಪರಮಾತ್ಮನನ್ನು ಸೇವಿಸುತ್ತಾ, ಬೇರೆ ಪ್ರಪಂಚದ ಕಡೆಗೆ ಪೃಷ್ಠಭಾಗವಿಟ್ಟು, ದೇವರೆಡೆಗೆ ಸದಾ ಧ್ಯಾನ, ದೃಷ್ಟಿ ಇಟ್ಟಿರುವ ನಂದಿಕೇಶ್ವರ, ಲಿಂಗದಲ್ಲಿ ಪ್ರಸ್ಫುಟವಾಗಿ ಕಾಣುತ್ತಿರುವ ಆ ಪರಮಾತ್ಮನ ಕಣ್ಗಳು, ಅಲಂಕಾರ ಮಾಡಿರುವ ಬಿಲ್ವಪತ್ರೆಯನ್ನು ಕಂಡಾಗ,

ತ್ರಿದಳಂ ತ್ರಿಗುಣಾಕಾರಂ ತ್ರಿನೇತ್ರಂ ಚ ತ್ರಿಯಾಯುಧಂ,

ತ್ರಿಜನ್ಮ ಪಾಪಸಂಹಾರಂ ಏಕಬಿಲ್ವಂ ಶಿವಾರ್ಪಣಮ್

ಎಂದು ಪ್ರಾರ್ಥಿಸಿ, ಪರಮಾತ್ಮನಿಗೆ ಅಲಂಕರಿಸಿರುವ ಶಾವಂತಿಗೆ, ಕನಕಾಂಬರ ಹೂಗಳ ಮಾಲೆಗಳು, ಕೆಳಗೆ ಕಟ್ಟಿರುವ ಬಿಳೀ ಪಂಚೆ, ಅದರ ಹಸಿರು ಕೆಂಪು ಜರಿ Border, ಎಲ್ಲವನ್ನೂ ಕಣ್ತುಂಬಿಕೊಂಡು, ಆ ಮಂಗಳಾರತಿಯ ಬೆಳಕಿನಲ್ಲಿ, ಆ ಪರಮಾತ್ಮನ ಲಿಂಗ ಸ್ವರೂಪವನ್ನು ಪರಮಾನಂದದಿಂದ ನೋಡಿ, ಮಂಗಳಾರತಿ ಕಣ್ಣಿಗೆ ಒತ್ತಿಕೊಂಡು, ವಿಭೂತಿ ಹಚ್ಚಿಕೊಂಡು, ಹರಕೆಗಳನ್ನೆಲ್ಲಾ ನಿನಗೆ ಸಮರ್ಪಿಸಿದ್ದೇನೆ ತಂದೇ ಮಹಾದೇವಾ ಅಂತ ಎಲ್ಲಾ ಹರಕೆಗಳನ್ನು ದೇವರಿಗೆ ತೋರಿಸಿ, ಹುಂಡಿಗೆ ಹಾಕಿ, ಅಲ್ಲಿ ದೊಡ್ಡ ತಟ್ಟೆಯಲ್ಲಿ ಇಟ್ಟಿರುವ ವಿಭೂತಿಯನ್ನು ಹಚ್ಚಿಕೊಂಡು, ಪ್ರಸಾದ ಬಿಲ್ವಪತ್ರೆ ತೊಗೊಂಡು, ಹೊರಗೆ ಬಂದ ಕೂಡಲೇ, ದೊಡ್ಡ ಬೆಳ್ಳಿ ಪಾತ್ರೆಯಲ್ಲಿ, ಸೌಟಿನಷ್ಟು ಇರುವ ಉದ್ಧರಣೆಯಲ್ಲಿ ತೀರ್ಥ ಕೊಡುತ್ತಿರುವುದನ್ನು, ಕಣ್ಣಿಗೆ ಒತ್ತಿಕೊಂಡು ಸ್ವೀಕರಿಸಿ, ಎಡಗಡೆ ಇರುವ ಲಿಂಗಗಳ ಭವ್ಯತೆಯನ್ನು ನೋಡಿ ಆನಂದಿಸುತ್ತಾ, ಬಲಗಡೆ ಇರುವ ವಲ್ಲಿ ದೇವಸೇನ ಸಮೇತನಾದ ಸುಬ್ರಹ್ಮಣ್ಯ ಸ್ವಾಮಿಯನ್ನು ನೋಡಿ,

"ಓಂ ತತ್ಪುರುಷಾಯ ವಿದ್ಮಹೇ, ಮಹಾಸೇನಾಯ ಧೀಮಹಿ, ತನ್ನೋ ಷಣ್ಮುಖಃ ಪ್ರಚೋದಯಾತ್"

ಎಂದು ಪ್ರಾರ್ಥಿಸಿ, ಸ್ವಾಮಿಗೆ ನಾವು ತಂದಿರುವ ಹೂವುಗಳನ್ನು ಸಮರ್ಪಿಸಿ, ಮತ್ತೆ ಮಂಗಳಾರತಿ, ತೀರ್ಥ ತೊಗೊಂಡು, ಪಕ್ಕದಲ್ಲಿರುವ ದಕ್ಷಿಣಾಮೂರ್ತಿಗೆ

"ಗುರುವೇ ಸರ್ವ ಲೋಕಾನಾಂ, ಭಿಷಜೇ ಭವರೋಗಿನಾಂ,

ನಿಧಯೇ ಸರ್ವ ವಿದ್ಯಾನಾಂ, ದಕ್ಷಿಣಾಮೂರ್ತಯೇ ನಮಃ"

ಎಂದು ನಮಸ್ಕರಿಸಿ, ಎದುರಿಗೆ ಮಂಟಪದಲ್ಲಿರುವ ಉತ್ಸವ ಮೂರ್ತಿಯ ಅಲಂಕಾರವನ್ನು ನೋಡಿ, ಆಹಾ, ಎಷ್ಟು ಚೆನ್ನಾಗಿ ಮಾಡಿದ್ದಾರೆ ಅಂತ ನೋಡಿ, ಎಡಗಡೆ ಇರುವ ದೊಡ್ಡ ಗಣಪತಿಯ ಬೆಣ್ಣೆ ಅಲಂಕಾರ, ಮಧ್ಯದಲ್ಲಿ ಇಟ್ಟಿರುವ Dry Fruits, ಎಲ್ಲದರ ಅಂದವನ್ನು ನೋಡಿ, ಅಲ್ಲೂ ಮಂಗಳಾರತಿ ಮಾಡಿಸಿಕೊಂಡು, ಹೂವು, ಪ್ರಸಾದ ತೊಗೊಂಡು, ನಂತರ

ಅಲ್ಲಿರುವ ವಿಧ ವಿಧವಾದ ಲಿಂಗಗಳನ್ನು ಕಣ್ತುಂಬಿಕೊಳ್ಳುತ್ತಾ, ಶಾರದಾದೇವಿಯ ಸನ್ನಿಧಿಗೆ ಬಂದು, ಪುಟ್ಟ ವೀಣೆ, ಮುದ್ದಾದ ತಾಯಿ ಶಾರದಾ ದೇವಿ, ಅಮ್ಮನವರ ಪಾದ, ಶ್ರೀಚಕ್ರ, ದೇವಿಯ ಅಲಂಕಾರ, ಒಡವೆಗಳು, ಪಟ್ಟೆ ರೇಷ್ಮೆ ಸೀರೆ, ಎಲ್ಲಾ ನೋಡಿ,

"ನಮಸ್ತೇ ಶಾರದಾ ದೇವೀ ಕಾಶ್ಮೀರಪುರವಾಸಿನೀಂ,

ತ್ವಾಂ ಅಹಂ ಪ್ರಾರ್ಥಯೇ ನಿತ್ಯಂ ವಿದ್ಯಾ ಬುದ್ಧಿಂ ಚ ದೇಹಿಮೇ"

ಅಂತ ಪ್ರಾರ್ಥನೆ ಮಾಡಿ, ಕುಂಕುಮ ಪ್ರಸಾದ ಇಟ್ಟುಕೊಂಡು, ಸೀದಾ ಬಂದು ಬಲಗಡೆಗೆ ತಿರುಗಿ, ಪಾರ್ವತೀ ದೇವಿಯ ಸನ್ನಿಧಿಗೆ ಬಂದು,

"ಯಾ ದೇವೀ ಸರ್ವ ಭೂತೇಷು ಮಾತೃರೂಪೇಣ ಸಂಸ್ಥಿತಾ,

ನಮಸ್ತಸ್ಯೈ, ನಮಸ್ತಸ್ಯೈ, ನಮಸ್ತಸ್ಯೈ ನಮೋ ನಮಃ"

ಅಂತ ಸ್ಮರಿಸಿ, ನಿಂತಿರುವ ಅಮ್ಮನವರು, ಗೋಪುರವಾಗಿ ಪೂಜೆ ಮಾಡಿರುವ ಒಂದು ಕಾಲಿನ ಅರಿಶಿನ, ಒಂದು ಕಾಲಿನ ಕುಂಕುಮ, ಅದೆಷ್ಟು ಚೆನ್ನಾಗಿ ಪೂಜೆ ಮಾಡಿರ್ತಾರೆ ಅಂತ ಸಂತೋಷಿಸುತ್ತಾ, ದೇವರ ಕಿರೀಟ, ಕರುಣಾಪೂರಿತವಾದ ಕಣ್ಣುಗಳು, ಮೂಗುತಿ, ಪುಟ್ಟ ಬಾಯಿ, ದೊಡ್ಡ ತಾಳಿ, ತುಂಬಾ ಆಭರಣಗಳು, ಪಟ್ಟೆ ರೇಷ್ಮೆ ಸೀರೆ, ಎಲ್ಲಾ ಕಣ್ತುಂಬಾ ನೋಡಿ, ದೇವಿಯ ಪಾದದ ದರ್ಶನ ಮಾಡಿ, ಕುಂಕುಮ, ಅರಿಶಿನ ಪ್ರಸಾದ ಹಚ್ಚಿಕೊಂಡು, ಪೂಜಾರಿಗಳು ಕೊಟ್ಟ ಹೂವು ಮುಡಿದು, Tippu Sultan ನ ಪಚ್ಚೆ ಲಿಂಗದ ದರ್ಶನ ಮಾಡಿ, ಬಲಗಡೆ ಇರುವ ಚಂಡಿಕೇಶ್ವರನಿಗೆ ವರದಿ ಒಪ್ಪಿಸಿ, ಸ್ವಾಮಿ, ನಾನು ಬಂದು ದರ್ಶನ ಭಾಗ್ಯ ಪಡೆದಿದ್ದೇನೆ, ನನ್ನ Account ಗೆ, ಇದನ್ನ Enter ಮಾಡೋ ತಂದೆ, ಅಂತ ಪ್ರಾರ್ಥಿಸಿ, ಅಲ್ಲಿ ನಿಂತು, ಮೇಲೆ ಇರುವ ಗೋಪುರ ದರ್ಶನ ಮಾಡಕ್ಕೆ ಪ್ರಯತ್ನಿಸಿ, ಅತಿ ಪುರಾತನವಾದ, ಶ್ರೇಷ್ಠವಾದ ದೊಡ್ಡ ಬಿಲ್ವಪತ್ರೆ ವೃಕ್ಷಕ್ಕೆ ವಂದಿಸಿ, ಮುಂದಕ್ಕೆ ಬಂದು, ಅಲ್ಲಿರುವ ಆದಿಕೇಶವ, ಸತ್ಯನಾರಾಯಣನಿಗೆ ನಾವು ತಂದ ತುಳಸಿ, ಹೂವು ಕೊಟ್ಟು,

"ವನಮಾಲೀ ಗದೀ ಶಾಂರ್ಙ್ಗೀ ಶಂಖೀ ಚಕ್ರೀ ಚ ನಂದಕೀ

ಶ್ರೀಮಾನ್ ನಾರಾಯಣೋ ವಿಷ್ಣು ವಾಸುದೇವೋ ಭಿರಕ್ಷತು"

ಅಂತ ಪ್ರಾರ್ಥಿಸಿ, ಅಮ್ಮನವರಿಗೆ ತೃಪ್ತಿಯಾಗಬೇಕಾದರೆ ಅವಳ ಸೋದರನನ್ನು ಸೇವಿಸಲೇ ಬೇಕಲ್ಲವೇ ಅಂತ ನಮಸ್ಕಾರ ಮಾಡಿ, ಪಕ್ಕದಲ್ಲಿ ಮುದ್ದಾಗಿ ತುಂಬಾ ತುಳಸಿ ಹಾಕಿಕೊಂಡು ಇರುವ ಆಂಜನೇಯ ಸ್ವಾಮಿಗೆ,

“ಅಸಾಧ್ಯ ಸಾಧಕಂ ಸ್ವಾಮಿನ್ ಅಸಾಧ್ಯಂ ತವ ಕಿಂ ವದಾ
ರಾಮದೂತ ಕೃಪಾಸಿಂಧೋ ಮತ್ಕಾರ್ಯಂ ಸಾಧಯ ಪ್ರಭೋ”

ಅಂತ ಪ್ರಾರ್ಥನೆ ಸಲ್ಲಿಸಿ, ಎಡಗಡೆ ಇರುವ ಲಿಂಗಗಳಿಗೆಲ್ಲಾ, “ಓಂ ನಮಃ ಶಿವಾಯ” ಅಂತ ನಮಸ್ಕಾರ ಮಾಡುತ್ತಾ, ಮುಂದೆ ಬಂದು, ಬಲಗಡೆ ತಿರುಗಿದರೆ ಕಾಣುವ, ಕಂಬದಲ್ಲಿ ಉದ್ಭವವಾಗಿರುವ ಗಣಪತಿಗೆ ನಮಸ್ಕಾರ, ಪ್ರದಕ್ಷಿಣೆಗಳನ್ನು ಮಾಡಿ, ನಾವು ನೋಡ್ತಾ ನೋಡ್ತಾ ಇದ್ದ ಹಾಗೇ ಈ ರೂಪ ಪ್ರಸ್ಫುಟವಾಗ್ತಾ ಇದೆ ಅಂತ ನೆನೆದು, ಮುಂದೆ ಬಂದು, ಅಲ್ಲಿರುವ ನವಗ್ರಹಗಳಿಗೆ,

“ನಮಃ ಸೂರ್ಯಾಯ ಚಂದ್ರಾಯ ಮಂಗಳಾಯ ಬುಧಾಯ ಚ
ಗುರುಶುಕ್ರಶನಿಭ್ಯಶ್ಚ ರಾಹುವೇ ಕೇತುವೇ ನಮಃ”

ಅಂತ ಪ್ರಾರ್ಥನೆ ಮಾಡಿಕೊಂಡು, ಪ್ರದಕ್ಷಿಣೆ, ನಮಸ್ಕಾರಗಳನ್ನು ಸಲ್ಲಿಸಿ, ಮುಂದೆ ಬಂದು, ಎಡಗಡೆ, ಭವ್ಯವಾಗಿ, ದೊಡ್ಡದಾಗಿರುವ ನಟರಾಜನನ್ನು ಕಣ್ಣು ತುಂಬಾ ನೋಡಿ, ವಿಭೂತಿ ಪ್ರಸಾದ ಇಟ್ಟುಕೊಂಡು, ಪಕ್ಕದಲ್ಲಿರುವ ಮಂಟಪ ಹತ್ತಿ, ಅಲ್ಲಿಂದ ಕಾಣುತ್ತಿರುವ ಧ್ವಜಸ್ತಂಭ, ದೇವರನ್ನ ಇನ್ನೊಂದು ಸಲ ದರ್ಶನ ಮಾಡಿ, ನಂದಿಕೇಶ್ವರನಿಗೆ ಪ್ರದಕ್ಷಿಣೆ ಮಾಡಿ, ಅವನ ಕಿವಿಯಲ್ಲಿ ಶ್ರದ್ಧಾ ಭಕ್ತಿಯಿಂದ ನಮ್ಮ ಬೇಡಿಕೆ, ಪ್ರಾರ್ಥನೆ ಹೇಳಿ, ಕೆಳಗಿಳಿದು ಬಂದು, ಮತ್ತೆ ಎಡಗಡೆ ಇರುವ ಲಿಂಗಗಳಿಗೆಲ್ಲಾ, “ಓಂ ನಮಃ ಶಿವಾಯ” ಅಂತ ನಮಸ್ಕಾರ ಮಾಡುತ್ತಾ ಬಂದು, ಬಲಗಡೆ ಲಾಡು ಪ್ರಸಾದ, ತೀರ್ಥದ Bottle ತೊಗೊಂಡು, ಮೆಟ್ಟಲು ಇಳಿದು, ಬಲಗಡೆ ಇರುವ ದೊಡ್ಡ ನಂದಿ ಹತ್ತಿರ ಮಂಗಳಾರತಿ, ಪ್ರಸಾದ ತೊಗೊಂಡು, ಬಿಲ್ವಪತ್ರೆ ವೃಕ್ಷ, ತುಳಸಿ ಕಟ್ಟೆಗೆ ಮತ್ತೆ ಪ್ರದಕ್ಷಿಣೆ ಮಾಡಿ, ಅಲ್ಲಿ ಕುಳಿತು, ಮೇಲೆ ಕಾಣ್ತಾ ಇರೋ ಚಂದ್ರನ್ನ ನೋಡ್ತಾ, ದೇಗುಲದ ಗೋಪುರವನ್ನ ನೋಡ್ತಾ, ಪ್ರಸಾದವನ್ನು, ಕಣ್ಣಿಗೆ ಒತ್ತಿಕೊಂಡು, ಬಾಯಿಗೆ ಹಾಕಿಕೊಂಡು, ನಮ್ಮಲ್ಲಿರುವ ನಂಜನ್ನೆಲ್ಲಾ ದೂರಮಾಡಪ್ಪಾ ಅಂತ ಬೇಡಿಕೊಂಡು ಬಂದರೆ, ನಂಜನಗೂಡಿನ, ಶ್ರೀ ನಂಜುಂಡೇಶ್ವರನ ದರ್ಶನ ಆಯಿತಲ್ಲವಾ?

**ಶಿವ ಶಿವ ಶಿವ ಓಂ ಶ್ರೀ ಮಹಾದೇವ ಶಂಭೋ**

**ಓಂ ನಮಃ ಶಿವಾಯ ॥**